ದಿನಾಂಕ 13.03.2026 ರಂದು ಆದ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ 12 ನೇ ಪ್ರತಿವಾದಿ ಪರ ಶ್ರೀ ಕೆ.ಬಿ. ವಕೀಲರಿಂದಃ**

ಕಮರ್ಷಿಯಲ್ ಕೋರ್ಟ, ಚಾಮರಾಜನಗರ ರವರ ನ್ಯಾಯಾಲಯದ ಅಸಲು ದಾವಾ ಸಂಖ್ಯೆ 4/2024 ರಲ್ಲಿನ ವಾದ ಪತ್ರ, ಪ್ರಮಾಣೀಕೃತ ಹೇಳಿಕೆ, ಸತ್ಯಾಪಣೆಯ ಪ್ರಮಾಣ ಪತ್ರ, ಲಿಖಿತ ಹೇಳಿಕೆ ಹಾಗೂ ಪ್ರಮಾಣೀಕೃತ ಹೇಳಿಕೆಯ ದೃಢೀಕೃತ ಹೇಳಿಕೆಗಳನ್ನು ಹಾಜರುಪಡಿದ್ದು, ಅವುಗಳನ್ನು ಒಟ್ಟಾಗಿ ನಿಡಿ-134 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ಮತ್ತು 3ನೇ ವಾದಿ ಪರ ಶ್ರೀ ಬಿ.ಎಸ್. ವಕೀಲರಿಂದಃ**

ದಿಃ 23.06.2022 ರಂದು ದಾವಾ ಐಟಂ ನಂ. 4 ನೇ ಸ್ವತ್ತನ್ನು ನಾನು ಖರೀದಿಸಿದ ನಂತರ ಸದರಿ ಸ್ವತ್ತು ನನ್ನ ಹೆಸರಿನಲ್ಲಿ ದಾಖಲಾಗಿರುತ್ತದೆ. ದಾವಾ ಐಟಂ ನಂ. 4 ನೇ ಸ್ವತ್ತು ಅನ್ಯಕ್ರಾಂತವಾಗಿರುವುದರಿಂದ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವುದರಿಂದ ಇ ಸ್ವತ್ತಿನಲ್ಲಿ ದಾಖಲಾಗಿರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ದಾವಾ ಐಟಂ ನಂ. 4 ನೇ ಸ್ವತ್ತನ್ನು ಖರೀದಿಗೆ ಪಡೆದ ನಂತರ ದಾವಾ ಐಟಂ ನಂ. 4 ನೇ ಸ್ವತ್ತಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿ 10 ನೇ ದನ್ನು ವಾದಿಗಳು ಗಣಿಗಾರಿಕೆ ಮಾಡಬಾರದು ಎಂದು ತಡೆಯಾಜ್ಞೆ ಕೋರಿ ಸಲ್ಲಿಸಿದ ಅರ್ಜಿ ವಜಾ ಆಗಿತ್ತು ಎಂದರೆ ಸರಿ. ಮಧ್ಯಂತರ ಅರ್ಜಿ 10 ನೇದ್ದಕ್ಕೆ ಸಂಬಂಧಿಸಿದಂತೆ ವಾದ ಮಂಡನೆ ಕಾಲಕ್ಕೆ ನನ್ನ ಪರ ವಕೀಲರು ಸಾಕಷ್ಟು ಹಣ ಖರ್ಚು ಮಾಡಿ ಗಣಿಗಾರಿಕೆ ನಡೆಸುತ್ತಿದ್ದೇವೆ, ತಡೆಯಾಜ್ಞೆ ನೀಡಿದಲ್ಲಿ ತೊಂದರೆ ಉಂಟಾಗುತ್ತದೆ ಎಂದು ಹಾಗೂ ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಕೆಲಸವಿಲ್ಲದೆ ತೊಂದರೆ ಉಂಟಾಗುತ್ತದೆ ಎಂದು ವಾದ ಮಂಡನೆ ಮಾಡಿದ್ದರು ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಆದೇಶ ಆಗುವವರೆಗೂ ದಾವಾ ಐಟಂ ನಂ. 4 ನೇ ಸ್ವತ್ತಿನಲ್ಲಿ ನಾನು ಗಣಿಗಾರಿಕೆ ನಡೆಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಇದೂವರೆಗೂ E.C. (**Environmental Certificate**) **ಪ**ಡೆದಿರುವುದಿಲ್ಲವೆ ಎಂದರೆ ಸಾಕ್ಷಿಯು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ದಿಃ 23.06.2022 ರ ಪೂರ್ವದಲ್ಲಿ ಯಾವುದಾದರೂ ದಾಖಲೆಯನ್ನು ದಾವಾ ಐಟಂ ನಂ. 4 ನೇ ಸ್ವತ್ತಿಗೆ ಮಾಡಿಕೊಂಡಿದ್ದಿರಾ ಎಂದರೆ ಸಾಕ್ಷಿಯು 2021 ನೇ ಇಸವಿಯಲ್ಲಿ ಕ್ರಯದ ಕರಾರು ಮಾಡಿಕೊಂಡಿದ್ದೆ ಎಂದು ನುಡಿಯುತ್ತಾರೆ. 10 ಮತ್ತು 13 ನೇ ಪ್ರತಿವಾದಿಯರ ಜೊತೆ ದಿಃ 11.11.2021 ರಂದು ಕ್ರಯದ ಕರಾರು ಮಾಡಿಕೊಂಡಿದ್ದೆನು. ಸದರಿ ಕ್ರಯದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ದಿಃ 11.11.2021 ರ ಕ್ರಯದ ಕರಾರು ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ದಿಃ 11.11.2021 ರಂದು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ದೆಹಲಿ ನ್ಯಾಯಾಲಯದಲ್ಲಿ ಪ್ರಕರಣ ಇದ್ದ ಬಗ್ಗೆ ಪ್ರತಿವಾದಿ 10 ಮತ್ತು 13 ಮತ್ತು ದೀಪೇಶ್ ಶರ್ಮ ರವರ ನಡುವೆ ದಿಃ 11.11.2021 ರಂದು ಕರಾರು ಮಾಡಿಕೊಂಡಿದ್ದೆ ಎಂದರೆ ಸರಿ. ಪ್ರತಿವಾದಿ 10 ಮತ್ತು 13 ಮತ್ತು ದೀಪೇಶ್ ಶರ್ಮ ರವರ ನಡುವೆ ಕರಾರು ಮಾಡಿಕೊಂಡು ನಂತರ ಈ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿ 10 ಮತ್ತು 13 ರವರ ಜೊತೆ ಕರಾರು ಪತ್ರ ಮಾಡಿಕೊಂಡಿರುತ್ತೇನೆ.

ನಾನು ಚುನಾವಣೆಗೆ ನಾಮಿನೇಷನ್ ನೀಡುವ ಸಮಯದಲ್ಲಿ ನಾನು ಖರೀದಿಸಿದ ಆಸ್ತಿಯ ಬಗ್ಗೆ ಹಾಗೂ ಕರಾರು ಮಾಡಿಕೊಂಡ ಆಸ್ತಿಗಳ ಬಗ್ಗೆ ತೋರಿಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಅನುಮತಿ ನೀಡಲಾಯಿತು.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ